ಆ) ಹಾಗಿದ್ದಲ್ಲಿ ಸದರಿ ಸಂಸ್ಥೆಯು ನೋಂದಣಿಯಾದಾಗಿನಿಂದ ಇದುವರೆಗೆ ಸರಿಯಾದ ಲೆಕ್ಕ ಪತ್ರಗಳನ್ನು ಒಪ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಕಾನೂನಿನಂತೆ ಯಾವ ಕ್ರಮ ಜರುಗಿಸಲಾಗಿದೆ ವಿಳಂಬವಾಗಲು ಕಾರಣವೇನು:

ಈ) ಸಂಘವನ್ನು ಪ್ರತಿ ವರ್ಷವೂ ಇಲಾಖೆಯಲ್ಲಿ ನವೀಕರಿಸಿಕೊಳ್ಳಲಾಗಿದಿಯೇ: ಇಲ್ಲದಿದ್ದಲ್ಲಿ ಕಾರಣಗಳೇನು: ಇದಕ್ಕೆ ಇಲಾಖೆಯ ಕ್ರಮವೇನು;

ಉ) ಕಾಯ್ದೆ ನಿಯಮ 11, 12 ಮತ್ತು 13 ಈ ಕಲಂಗಳನ್ನು ಉಲ್ಲಂಘಿಸಿರುವುದರಿಂದ ನಿಯಮದಂತೆ ಏನು ಕ್ರಮ ಜರುಗಿಸಲಾಗುತ್ತದೆ.

ಊ) ಈ ಎಲ್ಲಾ ಕಾರಣಗಳಿಂದಾಗಿ ಕಾಯ್ದೆಯಂತೆ ನಡೆಯದಿರುವ ಹಿನ್ನೆಲೆಯಲ್ಲಿ ಹಾಲಿ ಆಡಳಿತ ಮಂಡಳಿಯು ಅಸ್ಥಿತ್ವದಲ್ಲಿರುವುದೇ ಹೇಗೆ: ಸರ್ಕಾರದ ಆಡಳಿತಾಧಿಕಾರಿ ನೇಮಕ ಮಾಡಲು ಉದ್ದೇಶಿಸಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಹೌದು

ಆ) ಬಂದಿದೆ

ಇ) ಸಂಸ್ಥೆಗೆ ನೋಟೀಸ್ ಜಾರಿಮಾಡಲಾಗಿದೆ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರ ಪ್ರಕಾರ ವಿಚಾರಣೆ ನಡೆಯುತ್ತಿದೆ.

ಈ) ಇಲ್ಲ

ಸಂಘ ಪ್ರತಿ ವರ್ಷ ಲೆಕ್ಕ ಪತ್ರ ಸಲ್ಲಿಸಿರುವುದಿಲ್ಲ. ದಿನಾಂದ 29-3-2002 ರಂದು 64-65ನೇ ಸಾಲಿನಿಂದ 2001-2002ನೇ ಸಾಲಿನ ವರೆಗೆ ಲೆಕ್ಕ ಪತ್ರ ಸಲ್ಲಿಸಿದ್ದಾರೆ. ಸಂಘದ ಬಗ್ಗೆ ವಿಚಾರಣೆ ನಡೆಯುತ್ತಿರುವುದರಿಂದ ಲೆಕ್ಕಪತ್ರ ದಾಖಲಿಸಿಲ್ಲ. (ಅಂಗೀಕರಿಸಿರುವುದಿಲ್ಲ)

ಉ) ವಿಚಾರಣೆ ನಡೆಯುತ್ತಿದೆ.

ಊ) ಸಂಘಗಳ ನೋಂದಣಿ ಕಾಯ್ದೆ ಪ್ರಕಾರ ವಿಚಾರಣೆ ನಡೆಯುತ್ತಿದೆ. ವಿಚಾರಣೆ ವರದಿ ಸ್ವೀಕೃತಿ ನಂತರ ಪರಿಶೀಲಿಸಿ ನಿಯಮಗಳ ಪ್ರಕಾರ ಕ್ರಮ ಜರುಗಿಸಲಾಗುವುದು.

ಉಡುಪಿ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರು

1810 (1939) ಶ್ರೀ ಸಭಾಪರಿ ಯು.ಆರ್. (ಉಡುಪಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕಾರ್ಮಿಕ ಇಲಾಖೆಯ ನೋಂದಾಯಿತ ದಾಖಲೆಗಳ ಪ್ರಕಾರ ಇರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರದೊಂದಿಗೆ ವಿವಿಧ ಬಿಡಿ ಕಂಪನಿಗಳ ಹೆಸರನ್ನು ತಿಳಿಸುವುದು)

ಆ) ಪ್ರತಿಯೊಬ್ಬ ಬೀಡಿ ಕಾರ್ಮಿಕನಿಗೆ ವಾರದಲ್ಲಿ ಎಷ್ಟು ದಿನಕೆಲಸ ನೀಡಲಾಗುತ್ತಿದೆ.

ಇ) ಉಡುಪಿ ಜಿಲ್ಲೆಯಲ್ಲಿ 2001-02ರಿಂದ 28-2-2003ರವರೆಗೆ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ಬಿಡುಗಡೆಯಾದ ಹಣ ಹಾಗೂ ಯೋಜನೆಗಳು ಯಾವುದು? (ವಿವರ ಒದಗಿಸುವುದು)

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ತಾಲ್ಲೂಕು	ಬೀಡಿ ಕಾರ್ಮಿಕರ ಸಂಖ್ಯೆ
1. ಉಡುಪಿ	13,768
2. ಕಾರ್ಕಳ	19,626
3. ಕುಂದಾಪುರ	6,000
ಒಟ್ಟು	39,394

ತಾಲ್ಲೂಕುವಾರು ಬೀಡಿ ಸಂಸ್ಥೆಗಳು

ಉಡುಪಿ	ಕಾರ್ಕಳ
1. ಶರ್ಫುದ್ದೀನ್ ಜಾಫರ್ ಅಂಡ್ ಕಂಪನಿ	1. ಮೆ: ಶೆಣೈ ಬೀಡಿ ವರ್ಕ್ಸ್
2. ಮನೋಹರ್ ಬೀಡಿ	2. ಸದರನ್ ಇಂಡಿಯಾ ಬೀಡಿ
3. ಭಾರತ ಬೀಡಿ ವರ್ಕ್ಸ್	3. ಪಿ.ಕೆ.ಟಿ.ಸಿ. ಕರಿಯೂರು
4. ಎಸ್.ಕೆ. ಹೊಮಿಂ	4. ಜೆ.ಪಿ. ಕೋವಿಕೋ ಬೀಡಿ
5. ಶಕ್ತಿ ಬೀಡಿ	5. ಭಾರತ್ ಬೀಡಿ
6. ರಷೀಕ್ ಬೀಡಿ ವರ್ಕ್ಸ್	

ಕುಂದಾಪುರ

ಮೆ: ಕರಾವಳಿ ಸ್ಪೆಷಲ್ ಕೃಷ್ಣ ಬೀಡೀಸ್

ಅ) ಬೀಡಿ ಕಟ್ಟುವ ಕಾರ್ಮಿಕರಿಗೆ ಸರಾಸರಿ ವಾರದಲ್ಲಿ 2 ರಿಂದ 3 ದಿನಗಳು ಮಾತ್ರ ಕೆಲಸ ದೊರೆಯುತ್ತದೆ.

ಇ) ಆರೋಗ್ಯ ವಸತಿ ಮತ್ತು ವಿದ್ಯಾಭ್ಯಾಸದ ಯೋಜನೆಯಡಿಯಲ್ಲಿ ಕೇಂದ್ರ ಕಲ್ಯಾಣ ನಿಧಿಯಿಂದ ಉಡುಪಿ ಜಿಲ್ಲೆಗೆ ರೂ 80,61,904-00 ಹಣ ಬಿಡುಗಡೆ ಆಗಿರುತ್ತದೆ.

ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಹುದ್ದೆಗಳು

1811 (1904) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಅಧ್ಯಕ್ಷರು ಆಡಳಿತ ನಿರ್ದೇಶಕರು ಸೇರಿದಂತೆ ಇರುವ ಸಿಬ್ಬಂದಿ ಸಂಖ್ಯೆ ಎಷ್ಟು? (ಜಿಲ್ಲಾ ಕಛೇರಿಗಳಿದ್ದಲ್ಲಿ, ಅವುಗಳ ವಿವರವನ್ನೂ ತಿಳಿಸುವುದು)

ಆ) 2001-02ರಿಂದ 28-02-2003 ರವರೆಗಿನ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಆದಾಯ ಮತ್ತು ಖರ್ಚುಗಳು ಎಷ್ಟು? (ವಿವರ ನೀಡುವುದು); ಆದಾಯ ಯಾವ ಮೂಲದಿಂದ (ಉದಾ: ಬಸ್ಸುಗಳಿಂದ, ಹೋಟೆಲುಗಳಿಂದ ಇತ್ಯಾದಿ) ಹಾಗೂ ಖರ್ಚು, ಸಿಬ್ಬಂದಿ ವೆಚ್ಚ ಸೇರಿದಂತೆ (ಅಧ್ಯಕ್ಷರ ಸಂಬಳ, ದೂರವಾಣಿ ವಿವರಗಳನ್ನು) ವಿವರ ನೀಡುವುದು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಅ) 425 ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.